**(ದಿನಾಂಕಃ 18-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**<u>ಪಾಟಿ ಸವಾಲು : ವಾದಿ ಪರ ಶ್ರೀ ಕೆ ಬಿ ಕೆ ವಕೀಲರಿಂದ -</u>**

1. ರೂ. 3,00,000-00 ಲಕ್ಷ್ಮಿ ಅರ್ಬನ ಬ್ಯಾಂಕಿನಲ್ಲಿ ತೆಗೆದುಕೊಂಡ ಬಗ್ಗೆ ಕಾಗದ ಪತ್ರ ಹಾಜರ ಮಾಡಿದ್ದೇನೆ. ನಾನು ಇನಕಮಟ್ಯಾಕ್ಸ ರಿಟರ್ನ ಫೈಲ ಮಾಡುವುದಿಲ್ಲ. ನಾನು ಖರೀದಿ ಮಾಡಿದ ಆಸ್ತಿ ಸಿಟಿ ಎಸ್ ನಂ. 4335ಎ ಇರುತ್ತದೆ. ಅದರ ಮುನಸಿಪಾಲ ಉತಾರನ್ನು ಹಾಜರ ಮಾಡಿದ್ದೇನೆ. ಅಲ್ಲಿ ಕಟ್ಟಡ ಕಟ್ಟುವಾಗ ಪುರಸಭೆಯಿಂದ ಪರವಾನಿಗೆ 2005 ರಲ್ಲಿ ಪಡೆದಿದ್ದೇನೆ. ಅದರ ಟಿ ಎಂ ಸಿ ನಂಬರ ಹೇಳಲು ಬರುವುದಿಲ್ಲ. 2 ಅಂತಸ್ತು ಕಟ್ಟಡ ಕಟ್ಟಲು ಪರವಾನಿಗೆ ಪಡೆದಿದ್ದೇನೆ. ಪರವಾನಿಗೆ ಪಡೆಯಲು ಸಬ್ ರಜಿಸ್ಟ್ರಾರ ಕಛೇರಿಯ ಖರೀದಿ ಪತ್ರವನ್ನು ಹಚ್ಚಿ ಪರವಾನಿಗೆ ಪಡೆದಿದ್ದೇನೆ. ಮನೆ ಕಟ್ಟಿದ ನಂತರ ಕಂಪ್ಲೀಶನ ಸರ್ಟಿಫಿಕೇಟನ್ನು ಇಂಜಿನಿಯರ ಕಡೆಯಿಂದ ಪಡೆದಿದ್ದೇನೆ. ನಾನು ಮತ್ತು ನಮ್ಮ ಸಹೋದರರು ಅಲ್ಲಿ ಎರಡು ಮನೆ ಕಟ್ಟಿದ್ದೇವೆ. ಮೊದಲು 2 ಎಕರೆ ಎನ್ ಎ ಆಗಿತ್ತು . ಅದರ ಪಶ್ಚಿಮಕ್ಕೆ 30 ಗುಂಟೆ ಖಾಲಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಪಶ್ಚಿಮಕ್ಕೆ ರಸ್ತೆ ಇದೆ ಎಂದು ಹೇಳುತ್ತಾರೆ. ಸದರಿ 30 ಗುಂಟೆಯ ಪೂರ್ವ ಬಾಜು 2 ಎಕರೆ 10 ಗುಂಟೆ ಎನ್ ಎ ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. 2ನೇ ಬಾರಿ ಎನ್ ಎ ಆದಂತಹ ಜಾಗಕ್ಕೆ ಸಿ ಟಿ ಎಸ್ ನಂ. 4335ಎ ಎಂದು ನಂಬರ ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಅದರಲ್ಲಿ 1 ರಿಂದ 47 ಎಂದು ಪ್ಲಾಟಗಳು ಆಗಿವೆ ಎಂದರೆ ನನಗೆ ಮಾಹಿತಿ ಇಲ್ಲ. ಮೊದಲು ಆದಂತಹ ಎನ್ ಎ ಜಾಗದಲ್ಲಿ 1 ರಿಂದ 46 ಪ್ಲಾಟಗಳು ಹಾಗೂ ನಂತರ ಆದ ಎನ್ ಎ ಜಾಗದಲ್ಲಿ 1 ರಿಂದ 47 ಪ್ಲಾಟಗಳು ಮಾತ್ರ ಆಗಿದ್ದು ಅಲ್ಲಿ ಬೇರೆ ಯಾವುದೇ ಪ್ಲಾಟ ಆಗಲಿ ಅಥವಾ ಸಿ ಟಿ ಎಸ್ ನಂಬರ ಆಗಲಿ ಇರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ನಾನು 47 ರಿಂದ 61 ನೇ ನಂಬರಿನ ಪ್ಲಾಟಗಳನ್ನು ಸಿಟಿಎಸ್ ನಂ. 4335ಎ ರಲ್ಲಿ ಖರೀದಿ ಮಾಡಿದ್ದೇನೆ ಎಂದು ಹೇಳುತ್ತಾರೆ. ಆ ರೀತಿ ಖರೀದಿ ಆದ ಬಗ್ಗೆ ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರ ಮಾಡಿದ್ದೇನೆ. ನಾನು ಹೇಳಿದಂತೆ 47 ರಿಂದ 61 ನೇ ನಂಬರಿನ ಪ್ಲಾಟಗಳನ್ನು ಸಿಟಿಎಸ್ ನಂ.4335 ಹಾಗೂ 4335ಎ ರಲ್ಲಿ ಯಾವತ್ತೂ ಆಗಿಲ್ಲ, ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಮಹಮ್ಮದಶಫಿ ನದಾಫ ಇವರ ಹೆಸರಿನಲ್ಲಿರುವಂತಹ ಪೂರ್ಣ 7 ಎಕರೆ 19 ಗುಂಟೆ ಸರ್ವೆ ಮಾಡಲು ನನಗೆ ತೊಂದರೆ ಇಲ್ಲ ಎಂದರೆ ನಿಜ. ಶರೀಫಾ ನದಾಫ ಇವರು ದಿನಾಂಕ 21-11-2015 ರಲ್ಲಿ ದಾವಾಸ್ತಿಯನ್ನು ನಮಗೂ ಹಾಗೂ ಆಜು ಬಾಜುದವರಿಗೆ ನೋಟಿಸು ಕೊಟ್ಟು ಸರ್ವೆ ಮಾಡಿಸಿದ್ದರೂ ಸಹ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಪಿಟಿ ಶೀಟ ಬಂದ ನಂತರ ಅದು ತಪ್ಪು ಇದೆ ಎಂದು ನಾನು ಡಿಡಿಎಲ್ ಆರ್ ಗೆ ತಕರಾರು ಮಾಡಿಲ್ಲ. ಪಿಟಿ ಶೀಟು ರದ್ದು ಮಾಡಿಸಲು ಅಪೀಲು ಮಾಡಲು ನನಗೆ ಅಡಚಣೆ ಇಲ್ಲ ಎಂದರೆ  ನನಗೆ ಅದು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಾವು ಕಟ್ಟಿದಂತಹ ಮನೆಯನ್ನು ತೆರವುಗೊಳಿಸಬೇಕೆಂದು ವಾದಿ ನಮಗೆ ಹಿರಿಯರ ಮೂಲಕ ಹೇಳಿದ್ದಳು ಎಂದರೆ ಸರಿಯಲ್ಲ. ನಾನು ಸದರಿ ಮನೆಯನ್ನು ತೆರವುಗೊಳಿಸದ ಕಾರಣ ವಾದಿ ಈ ಕೇಸು ಹಾಕಿದ್ದಾರೆ ಎಂದರೆ ಸರಿಯಲ್ಲ. **30** ಗುಂಟೆ ವಾದಿಗೆ ಸೇರಿದ್ದು ಎಂದು ಗೊತ್ತಿದ್ದರೂ ಸಹ ನಾನು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**